# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಭಟ್ಕಳ.

ಎಂವಿಸಿ ನಂ.394/2022

ಪಿಡಬ್ಲು :2

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

ದಿನಾಂಕಃ 14-07-2023.

| | | |
|---|---|---|
| **ಹೆಸರು** | : | ಡಾ.ಮೋಹನದಾಸ ಶೆಟ್ಟಿ |
| **ತಂದೆಯ ಹೆಸರು** | : | ಶೇಖರ ಶೆಟ್ಟಿ |
| **ವಯಸ್ಸು** | : | 60 ವರ್ಷ |
| **ಉದ್ಯೋಗ** | : | ಕೀಲು ಮೂಳೆ ತಜ್ಞರು |
| **ವಾಸ** | : | ಆದರ್ಶ ಆಸ್ಪತ್ರೆ, ಉಡುಪಿ |

**ಈ ಪ್ರಕರಣದಲ್ಲಿ ಸದರಿ ಸಾಕ್ಷಿಯು ವೈದ್ಯರಿದ್ದು ಅರ್ಜಿದಾರ ಮತ್ತು ಎದುರುದಾರ ವಕೀಲರ ಸಮ್ಮತಿ ಮೇರೆಗೆ ನ್ಯಾಯಾಲಯ ಮತ್ತು ವೈದ್ಯರ ಸಮಯ, ವೆಚ್ಚವನ್ನು ಗಮದಲ್ಲಿಟ್ಟುಕೊಂಡು ಸದರಿ ಸಾಕ್ಷಿಯನ್ನು ಉಚ್ಚ ನ್ಯಾಯಾಲಯದ ನಿಯಮಾವಳಿ ಪ್ರಕಾರ ಸಾಕ್ಷಿಯನ್ನು ವಿ.ಸಿ ಮುಖಾಂತರ ದಾಖಲಿಸಿಕೊಳ್ಳಲಾಗಿದೆ. ಸದರಿ ಸಾಕ್ಷಿಯ ಸಹಿಯನ್ನು ಪ್ರಮಾಣ ಪತ್ರದ ಮೇಲೆ ಇಮೇಲ್ ಮುಖಾಂತರ ಸಾಕ್ಷಿಗೆ ಕುಳುಹಿಸಿ ಅವರು ಸಹಿ ಮಾಡಿ ಕಳುಹಿಸಿದ್ದನ್ನು ಕಡತಕ್ಕೆ ಅಳವಡಿಸಿಕೊಳ್ಳಲಾಗಿದೆ.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜೆ.ಎಂ.ಎಂ. ವಕೀಲರಿಂದ :-**

ನಾನು ಕಳೆದ 17 ವರ್ಷದಿಂದ ಆದರ್ಶ ಆಸ್ಪತ್ರೆ, ಉಡುಪಿಯಲ್ಲಿ ಕೀಲು ಮೂಳೆ ತಜ್ಞನಾಗಿ ಕೆಲಸ ಮಾಡುತ್ತಿದ್ದೇನೆ.

ಈ ಪ್ರಕರಣದ ಗಾಯಾಳು ನಮ್ಮ ಆಸ್ಪತ್ರೆಗೆ ದಿ.21-02-2021 ರಂದು ರಸ್ತೆ ಅಪಘಾತಗೊಂಡು ಚಿಕಿತ್ಸೆಗಾಗಿ ಬಂದಿದ್ದರು. ಅವರನ್ನು ಪರೀಕ್ಷೆಗೊಳಪಡಿಸಿದಾಗ ಎಡ ಆ್ಯಂಕಲ್ ಮತ್ತು ಕೈ ಗೆ ಗಾಯವಾಗಿತ್ತು. ಅದಕ್ಕೆ ಪ್ಲಾಸ್ಟರಿಂಗ್ ಮಾಡಿ ಚಿಕಿತ್ಸೆ ಕೊಡಲಾಗಿತ್ತು. ಕಾಲಿಗೆ ಗಾಯವಾದ ಬಗ್ಗೆ ಚಿಕಿತ್ಸೆ ಕೊಡಲಾಗಿದೆ. ಅರ್ಜಿದಾರಳು ದಿ.01-03-2021 ರಂದು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ. ಅರ್ಜಿದಾರಳು ಫಾಲೋಅಪ್ ಟ್ರೀಟ್‌ಮೆಂಟ್ ಗೆ 4-5 ಬಾರಿ ಆಸ್ಪತ್ರೆಗೆ ಬಂದಿರುತ್ತಾರೆ. ನಂತರ ಮತ್ತೊಮ್ಮೆ ದಿ.18-03-2021 ರಂದು ಆಸ್ಪೆತ್ರಗೆ ಒಳರೋಗಿಯಾಗಿ ದಾಖಲಾಗಿ ದಿ.21-03-2021 ರಂದು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ. ಅರ್ಜಿದಾರರಿಗೆ

ಒಟ್ಟು ಶೇ.21 ರಷ್ಟು ಅಂಗನ್ಯೂನ್ಯತೆ ಆಗಿರುತ್ತದೆ. ಆ ಬಗ್ಗೆ ನಾನು ಪ್ರಮಾಣ ಪತ್ರ ನೀಡಿರುತ್ತೇನೆ. ಅದನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು:** 2 ನೇ ಎದ್ರುದಾರರ ಪರ ಶ್ರೀ ಎಸ್.ಎಮ್.ಬಿ. ವಕೀಲರಿಂದ

ಅರ್ಜಿದಾರರು ಮೊದಲು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ಬಗ್ಗೆ ಗೊತ್ತಿಲ್ಲ, ಆದರೆ ನೇರವಾಗಿ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಎಂ.ಎಲ್.ಸಿ ಮಾಡಲಾಗಿದೆ. ಆದರೆ ಅದರ ದಿನಾಂಕ ನನಗೆ ಹೇಳಲು ಬರುವುದಿಲ್ಲ. ಅರ್ಜಿದಾರಳಿಗೆ ಮೂಳೆಗೆ ಸಂಬಂಧಿಸಿದಂತೆ ಯಾವುದೇ ಶಸ್ತ್ರಚಿಕಿತ್ಸೆ ಮಾಡಿರುವುದಿಲ್ಲ. ನಿಪಿ-11 ರಲ್ಲಿ ಹೇಳಿದ ನ್ಯೂನ್ಯತೆಗಳು ಫಾಲೋಅಪ್ ಟ್ರೀಟ್‌ಮೆಂಟ್ ನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನಿಪಿ-11 ರಲ್ಲಿ ಬರೆದ ಯಾವುದೇ ನ್ಯೂನ್ಯತೆ ಇಲ್ಲದೇ ಇರುವುದರಿಂದ ಫಾಲೋಅಪ್ ಟ್ರೀಟ್‌ಮೆಂಟ್ ನಲ್ಲಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಅಂಗನ್ಯೂನ್ಯತೆಯನ್ನು ಯಾವ ಮಾರ್ಗಸೂಚಿಯಂತೆ ತಯಾರಿಸಲಾಗಿದೆ ಎಂದು ನಿಪಿ-11 ರಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಳು ಆಸ್ಪತ್ರೆಗೆ ಮೊದಲು ಭೇಟಿ ನೀಡಿದಾಗ ಆತಳೊಂದಿಗೆ ಆತಳ ತಂದೆಯು ಇದ್ದರು. ನಾನು ಹೇಳಿದಂತೆ ಅರ್ಜಿದಾರಳಿಗೆ ಯಾವುದೇ ಅಂಗನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಳಿಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗಿಲ್ಲ, ಆದರೂ ಸಹ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾಳೆಂದು ಹೆಚ್ಚಿನ ಪರಿಹಾರ ಸಿಗಲಿ ಎಂದು ನಿಪಿ-11 ರಂತೆ ಸುಳ್ಳು ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-11 ರಲ್ಲಿ ಹೇಳಿದಂತೆ ಅರ್ಜಿದಾರಳಿಗೆ ಯಾವುದೇ ನ್ಯೂನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ನಾನು ಸಹಿ ಮಾಡಿಲ್ಲ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆಎಂಎಫ್‌ಸಿ, ಭಟ್ಕಳ .**